ವಿ. ಹಮೀದ್, ವಿಟ್ಲ
*ಹುಡುಗಿಯನ್ನು ಮಾವಿನಹಣ್ಣಿಗೆ ಹೋಲಿಸುತ್ತಾರೆ. ಏಕೆ?*



ಆಕರ್ಷಕ, ಸುವಾಸನೆ, ಮೃದು. ಆದರೆ ಅಂತರಂಗದಲ್ಲಿ what a ಗಟ್ಟಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಗುಣ ನೋಡಿ ಹೆಣ್ಣು ಕೊಡಬೇಕು; ಏನು ನೋಡಿ ಪಾರ್ಟಿ ಸೀಟ್ ಕೊಡಬೇಕು?*
ಗುನ್ನ ನೋಡಿ; ಮುಖ, ಮೈ ಮೇಲಿನ ಗುನ್ನದೊಳ್ ಪ್ರಥಮನೇ ರೌಡಿಯರೊಳುತ್ತಮನು.

ಎಂ.ಎನ್. ಸೋಮಶೇಖರ್, ಮೈಸೂರು
*ಬ್ರಹ್ಮ ಮತ್ತು ಸರಸ್ವತಿಯರ ಮಧ್ಯೆ ಏಕೆ ಎಂದೂ ಒಂದು ಸಣ್ಣ ಪುಟ್ಟ ಜಗಳವೂ ಆಗಲಿಲ್ಲ?*
ಗಂಡನಿಗೆ ಕೈ ತುಂಬ ಕೆಲಸ, ಹೆಂಡತಿಗೆ ವಿದ್ಯೆ, ತಿಳಿವಳಿಕೆ ಇದ್ದರೆ ಜಗಳ ಇರಲ್ವಂತೆ.

ಓಂ ಚನ್ನೇಶ್, ಭದ್ರಾವತಿ
*ಬರ್ತ್‌ಡೇ ಕೇಕ್ ಮೇಲೆ ಮೋಂಬತ್ತಿಯನ್ನೇ ಏಕೆ ಹಚ್ಚಿಡ್ತಾರೆ?*



ಬತ್ತಿ ಇಟ್ಟು ಕಡ್ಡಿ ಗೀರೋವ್ರನ್ನ ಊಫ್ ಅನ್ನಿಸ್ಬಿಡು ಅಂತ ಸೂಚಿಸಕ್ಕೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಓದುಗರ ನೂರಾರು ಪ್ರಶ್ನೆಗಳಿಗೆ ಚಾಣಾಕ್ಷ ಉತ್ತರ ನೀಡುವ ನಿಮಗೇಕೆ ಇನ್ನೂ ಡಾಕ್ಟರೇಟ್ ಬಂದಿಲ್ಲ?*
ಬಂದಿದೆಯಲ್ಲ! ಡಾಕ್ಟರೂ ಬಂದಿದ್ದಾರೆ, ಅವರ ರೇಟ್ ಪಟ್ಟಿಯೂ ಬಂದಿದೆ.

ಎಂ.ಎ. ಕುಮಾರ್, ಬೆಂಗಳೂರು
*ಬಿಳಿ ಶುಭ. ಕಪ್ಪು ಅಶುಭ. ಕಾವಿ?*
ಕಾವಿದ್ದರೆ ಅಶುಭ; ಕಾವಿಲ್ಲದಿದ್ದರೆ ಶುಭ.

ಎಸ್.ಜಿ. ಕರನಂದಿ, ಹುನಗುಂದ
*ಸತ್ತವರ ಎದುರಿಗೆ ಹಲಗೆ, ತಮಟೆ ಬಾರಿಸುವುದು ಏತಕ್ಕಾಗಿ?*
ಅದು ಫೈನಲ್ ಟೆಸ್ಟ್. ಅಷ್ಟು ಗಲಾಟೆಗೂ ಏಳದಿದ್ದರೆ ಅವನು ನಿಜವಾಗಿಯೂ ಸತ್ತಿದ್ದಾನೆಂದು ಅರ್ಥ.

ಆರ್. ಮಧುಸೂದನ್, ಹಾಸನ
*ಗಡಿಯಾರದ ಸೆಕೆಂಡ್ ಮುಳ್ಳು ಮತ್ತು ಗಂಟೆಯ ಮುಳ್ಳಿಗೆ ಹೆಂಡತಿ ಮತ್ತು ಪ್ರೇಯಸಿಯನ್ನು ಹೋಲಿಸಬಹುದೆ?*
ಏಕೆ? ನಿಮ್ಮ ಹೆಂಡತಿ ಷಾರ್ಟ್ & ಸ್ಲೋ, ಪ್ರೇಯಸಿ ಟಾಲ್ & ಫಾಸ್ಟ್ ಇದ್ದಾರೇನು?

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಬಿಎಂಟಿಸಿ ಬಸ್ಸಿನಲ್ಲಿ ತರುಣಿಯರಿಗೆ ಆಸನ ಬಿಟ್ಟುಕೊಡುವ ತರುಣರು ವಯಸ್ಸಾದವರಿಗೆ ಏಕೆ ಬಿಟ್ಟುಕೊಡುವುದಿಲ್ಲ?*
ವಯಸ್ಸಾದವರಿಗೆ ಕೂತರೆ ಏಳಲು ಕಷ್ಟವೆಂಬ ಅನುಕಂಪ, ತರುಣಿ ಆಸನವಿತ್ತರೆ ಆಸನ್ನಳಾದಾಳೆಂಬ ಆಸೆ!

ಮಹಾವೀರ ಕಾಸರ, ಶಿವಮೊಗ್ಗ
*‘ತಲೆ ಕೆಟ್ಟರೆ ನಾನು ಮನುಷ್ಯನೇ ಅಲ್ಲ’ ಎಂದರೇನು?*
ತನ್ನ ತಲೆ ಕೆಟ್ಟ ತಕ್ಷಣ ಪ್ರಾಣಿದಯಾಸಂಘಕ್ಕೋ, ಹುಚ್ಚುನಾಯಿ ವ್ಯಾನ್‌ಗೋ ಫೋನ್ ಮಾಡಿರೆಂಬ ಸೂಚನೆ.

ದಿನೇಶ್, ಗುಡ್ಡದೂರು
*ಗಂಡಹೆಂಡಿರ ಜಗಳ ಉಂಡು ಮಲಗುವ ತನಕ; ಉಣ್ಣದೆ, ಮಲಗದೆ ಇದ್ದರೆ...?*
ಜಗಳ ಸೀರಿಯಲ್ಲಂತೆ ಮುಂದುವರಿದು ಎರಡೂ ಕಡೆಯ ವಕೀಲರಿಗೆ ಹೈಕ್ಲಾಸ್ ಊಟ, ಟಾಪ್‌ಕ್ಲಾಸ್ ನಿದ್ದೆ.

ಶ್ವೇತಾಲಕ್ಷ್ಮಿ ಅಮೈ, ಬೆಂಗಳೂರು
*ಕಳ್ಳರನ್ನು ಒದ್ದು ಬುದ್ಧಿ ಕಲಿಸುವ ಪೊಲೀಸರು ಬೊಕ್ಕಸ ಲೂಟಿಗೈವರನ್ನು ಏಕೆ ಒದ್ದು ಬುದ್ಧಿ ಕಲಿಸಬಾರದು?*
ಒದೆಯಕ್ಕೇಂತ ಒಂದ್ಕಾಲೆತ್ತುವಷ್ಟರಲ್ಲಿ ಇಂಫ್ಲುಯೆನ್ಸ್ ಬಳಸಿ ಇನ್ನೊಂದ್ಕಾಲ್ನೂ ಎಳೆದು ಬೀಳಿಸಿಬಿಡ್ತಾರಲ್ಲಾ...

## ಬಹುಮಾನಿತ ಪ್ರಶ್ನೆ


ಕುಮಾರ ಚಲವಾದಿ, ಹೊಳೆನರಸಿಪುರ
*ದೇವರು ಮತ್ಸ್ಯಾವತಾರವನ್ನೂ ತಾಳಿದ್ದಾನೆ. ಹಾಗಾದರೆ ನಾವು ಮೀನು ತಿನ್ನುವುದು ತಪ್ಪಲ್ಲವೆ?*
ದೇವರನ್ನೇ ಹುರಿದುಮುಕ್ಕುವ ಬುದ್ಧಿಜೀವಿಗಳ ಈ ಕಾಲದಲ್ಲಿ ಇದಕ್ಕೇನೂ ಮೀನಮೇಷ ಎಣಿಸಬೇಕಿಲ್ಲವಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು
*ಇತ್ತೀಚೆಗೆ ಆಫೀಸಿಗೆ ಬರುವ ಹೆಂಗಸರೇಕೆ ಬೆನ್ನು ತೋರಿಸುವ ಕುಪ್ಪಸ ತೊಡುತ್ತಾರೆ?*
ಹಾಗೆ ಬಂದವರ ಬೆನ್ನುಬಿದ್ದು ನೀವು ಕೆಲಸ ಮಾಡಿಕೊಡುವಿರಂತಲ್ಲ!

ವೈ.ಜಿ. ನರಸಿಂಹನ್, ಶಿವಮೊಗ್ಗ
*ಗಿಡ, ಮರ, ಪಶುಪಕ್ಷಿಗಳಿಗೆ ಬೇಡದ ದೇವರು ಮನುಷ್ಯನಿಗೆ ಯಾಕೆ ಬೇಕು?*
ಕೊಳಕು, ವಾಸನೆ ಎಲ್ಲೆಲ್ಲೋ ಅಲ್ಲೆಲ್ಲಾ ಡೆಟಾಲ್, ಫೆನಾಯ್ಲ್ ಬೇಕು.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಒಂದು ವೇಳೆ ಹುಟ್ಟುವಾಗ ಇತರರು ಅತ್ತು, ಸಾಯುವಾಗ ನಕ್ಕಿದ್ದಿದ್ದರೆ ಹೇಗಿರುತ್ತಿತ್ತು?*
ಹುಟ್ಟಿದ್ದರಿಂದ ಅವರ ಆಸ್ತಿ ಹೋಯಿತು, ಸತ್ತಿದ್ದರಿಂದ ಮತ್ತೆ ದಕ್ಕಿತೆಂಬುದು ಗೊತ್ತಾಗುತ್ತಿತ್ತು.

ಚೈತ್ರಾ ಕುಕ್ಕೆಮನೆ, ಬೆಂಗಳೂರು
*ವಿಜ್ಞಾನ ಎಷ್ಟು ಮುಂದುವರಿದರೂ ಮೂಢನಂಬಿಕೆಯನ್ನು ನಂಬುವ ಜನರೂ ಇದ್ದಾರಲ್ಲಾ...?*



ಅಜ್ಞಾನದ ತಲೆಗೆ ವಿಜ್ಞಾನದ ಟೋಪಿ. ಟೋಪಿ ಹಾಕಿಕೊಳ್ಳದವರು ಟೋಪಿ ಹಾಕಿಸಿಕೊಳ್ಳುತ್ತಾರೆ!

ರಾಮಚಂದ್ರ ಎಂ. ಪೈ, ಹೊನ್ನಾವರ
*ಶಿವನಂತೆ ಮಾನವನಿಗೆ ಮೂರು ಕಣ್ಣುಗಳು ಇದ್ದಿದ್ದರೆ?*
ವೆಲ್ಡಿಂಗ್ ಶಾಪ್‌ಗಳವರು ಕಣ್ತೆರೆದೂ ತೆರೆದೂ ಬರ್ನಿಂಗ್, ಹೀಟಿಂಗ್, ವೆಲ್ಡಿಂಗ್ ಮಾಡಲು ಅನುಕೂಲವಾಗುತ್ತಿತ್ತು.

■ ರಾಮ್